**2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 551/16**

| | | |
|---|---|---|
| ಹೆಸರು | ಸಿ ಎಸ್ ಬಸವರಾಜ | PW 4 |
| ತಂದೆ ಹೆಸರು | ನಂಜಪ್ಪ | |
| ವಯಸ್ಸು | 60 ವರ್ಷ | |
| ಉದ್ಯೋಗ | ನಿವೃತ್ತ ಪಿ ಎಸ್ ಐ | ದಿನಾಂಕಃ 18.12.2023 |
| ವಾಸ | ಕಿತ್ತೂರು ಗ್ರಾಮ, ದಾವಣಗೆರೆ ಜಿಲ್ಲೆ | |

**ಕಲಂ 299 ರಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿಯ ಹೇಳಿಕೆ.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಸನ್ 2017 ರಿಂದ 2021 ರವರೆಗೆ ನಾನು ಮಲಬೆನ್ನೂರು ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಸಿದ್ದೇನೆ.

ದಿನಾಂಕ 23.01.2018 ರಂದು ನಾನು ಮತ್ತು ನಮ್ಮ ಠಾಣಾ ಸಿಬ್ಬಂದಿಯಾದ ಅಶೋಕ ರೆಡ್ಡಿ ಹೆಚ್ ಸಿ 197 ಇಬ್ಬರೂ ಸೇರಿ ನ್ಯಾಯಾಲಯದಿಂದ ಆದೇಶದ ಮೇರೆಗೆ ಪ್ರೊಕ್ಲಾಮೇಷನ ನ್ನು ಜಾರಿ ಮಾಡಲು ಹರಿಹರ ನಗರದ ಅಗಸರ ಬೀದಿಯಲ್ಲಿರುವ ಮೂಲಿಮನೆ ಬಸವರಾಜಪ್ಪ ರವರ ಮನೆಯ ಹತ್ತಿರ ಹೋಗಿ ಆರೋಪಿತರ ಬಗ್ಗೆ ಟಾಂ ಟಾಂ ಹೊರಡಿಸಿ ಅವರು ಪತ್ತೆ ಆಗದೇ ಇದ್ದುದ್ದರಿಂದ ಮತ್ತು ಅವರ ಬಗ್ಗೆ ಯಾವುದೇ ಮಾಹಿತಿ ದೊರೆಯದೇ ಇದ್ದುದ್ದರಿಂದ ಆರೋಪಿತರು ವಾಸವಾಗಿದ್ದರು ಎನ್ನಲಾದ ಮನೆಯ ಬಳಿ ಪಂಚರಾದ ಶಬ್ಬೀರ ತಂದೆ ಅಬ್ಬಾಸ ಮತ್ತು ಬಸವರಾಜ ತಂದೆ ಸಂಗಪ್ಪ ರವರವನ್ನು ಕರೆಯಿಸಿ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ ನ್ಯಾಯಾಲಯದಿಂದ ನೀಡಿದ ಪ್ರೊಕ್ಲಾಮೇಷನ್ ನ್ನು ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಪುರ ಸಭೆ ಕಛೇರಿ, ಚಿತ್ರ ಮಂದಿ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿರುತ್ತೇನೆ. ನಂತರ ಸದರಿ ಪ್ರೊಕ್ಲಾಮೇಷನನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರೊಕ್ಲಾಮೇಷನನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.